**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 10661/2016**

**ಚಾಸಾ-8 ಪ್ರಾಸಾ- 6**

| | |
|---|---|
| **ಸಾಕ್ಷಿದಾರರ ಹೆಸರು** | ಪುಟ್ಟ ಸ್ವಾಮಿ |
| **ತಂದೆಯ ಹೆಸರು** | ದಾಸೇಗೌಡ |
| **ವಯಸ್ಸು** | 60 ವರ್ಷ |
| **ಉದ್ಯೋಗ** | ಪ್ರಾವಿಜನ್ ಸ್ಟೋರ್ , |
| **ವಾಸ** | ಗವಿಪುರಂ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 22.03.2024 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ಎಸ್.ಎಲ್. ವಿ. ಟ್ರೇಡಸ್ ಹೆಸರಿನಲ್ಲಿ ಸುಮಾರು 20 ವರ್ಷಗಳಿಂದ ಪ್ರಾವಿಜನ್ ಸ್ಟೋರ್ ನ್ನು ಗವಿಪುರಂ ನಲ್ಲಿ ಇಟ್ಟು ಕೊಂಡಿದ್ದೇನೆ. ಹಿಂದೂಸ್ತಾನ್ ಯೂನಿ ಲಿವರ್ ವಸ್ತುಗಳನ್ನು ವಿಶಾಖ ಮಾರ್ಕೆಟಿಂಗ್ ಪ್ರೈ.ಲಿ. ರವರಿಂದ ಖರೀದಿಸುತ್ತಿದ್ದೆ. ವಿಶಾಖ ಮಾರ್ಕೆಟಿಂಗ್ ಗೆ ನಾನು ಆರ್ಡರ್ ನೀಡಿದ ವಸ್ತುಗಳನ್ನು ತಂದು ಕೊಡುತ್ತಿದ್ದರು. ನಂತರ ನಾವು ಹಣ ಕೊಡುತ್ತಿದ್ದೇವು. ನಾನು ಯಾವುದೇ ಹಾಕಿ ಉಳಿಸಿಕೊಳ್ಳದೇ ಹಣ ನೀಡಿರುತ್ತೇನೆ. ಚಂದ್ರ ಶೇಖರ್ ಎನ್ನುವವರು ಆಗ ವಸೂಲಿಗೆ ಬರುತ್ತಿದ್ದರು. ಅವರು ಬಿಲ್ ನೀಡುತ್ತಿದ್ದರು ಬಿಲ್ ಪ್ರಕಾರ ನಾನು ಅವರಿಗೆ ಸಂಪೂರ್ಣ ಹಣ ಕೊಡುತ್ತಿದ್ದೆ. ಸ್ವಲ್ಪ ದಿನಗಳ ನಂತರ ನಾವು ನೀಡಿರುವ ಹಣ ಕಂಪನಿಗೆ ನೀಡದೇ ದುರುಪಯೋಗ ಆಗಿದೆ ಎಂದು ತಿಳಿಯಿತು. ಚಂದ್ರ ಶೇಖರ್ ರವರು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ತಿಳಿಯಿತು. ಸದರಿ ಚಂದ್ರಶೇಖರ್ ನ್ನು ನಾನು ನೋಡಿರುತ್ತೇನೆ. ನೋಡಿದರೆ ಗುರುತಿಸುತ್ತೇನೆ. ಅವರು ನ್ಯಾಯಾಲಯದ ಮುಂದೆ ಇದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ. ಈ ವಿಷಯವನ್ನು ಪೊಲೀಸರಿಗೆ ಹೇಳಿರುತ್ತೇನೆ.

ಪಾಟೀ ಸವಾಲು : ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿಗೆ ಪಾಟೀಸವಾಲು ಮಾಡಲು ಕೇಳಿದಾಗ ಕಾಲವಕಾಶ ಕೋರಿದ್ದು ಸಮಂಜಸ ಕಾರಣಗಳು ಇರದೇ ಇರುವ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇದೆ

3 ನೇ ಎ.ಸಿ.ಎಮ್.ಎಮ್.ನ್ಯಾ.

ಬೆಂಗಳೂರು.